

ಕಲಾವಿದ ಬಾಬಾ ಅಲ್ಲಾದಿನ್ ಹರವಲ್ಲಭ್ ಸಂಗೀತೋತ್ಸವವದು. ಅಲ್ಲಿ ನಡೆಸಿಕೊಟ್ಟ ಸೋಲೊ ಕಛೇರಿ ನನ್ನ ಸಂಗೀತ ಬದುಕಿಗೆ ಹೊಸ ಆಯಾಮವನ್ನೇ ಒದಗಿಸಿಕೊಟ್ಟಿತು.

ಅದಾಗಿ ತಂದೆ ಜೊತೆ ವಿದೇಶಗಳಲ್ಲೂ ಹಲವು ಕಛೇರಿಗಳಲ್ಲಿ ಭಾಗವಹಿಸಿದೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಒಮ್ಮೆ ಕ್ಯಾಲಿಫೋರ್ನಿಯಾದಲ್ಲಿ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಮನೆಯಲ್ಲಿ ನಾವೆಲ್ಲ ಸೇರಿದ್ದೆವು. ನಾನು ನುಡಿಸಿದ ತಬಲಾ ಸೋಲೊದ ಧ್ವನಿಮುದ್ರಣವನ್ನು ಖಾನ್ ಅವರು ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಅವರಿಗೆ ಕೇಳಿಸಿದಾಗ ಜಾಕೀರ್ ಹುಸೇನ್ ಭಾವಪರವಶರಾದರು. ಅತ್ಯಂತ ಖುಷಿಪಟ್ಟರಲ್ಲದೆ ಬಹಳ ಕೊಂಡಾಡಿದರು. ಇದು ನನ್ನ ಜೀವನದಲ್ಲಿ ಎಂದೂ ಮರೆಯಲಾರದ ಘಟನೆಯಾಯಿತು.

1997ರಲ್ಲಿ ಹಾಲೆಂಡ್‌ನಲ್ಲಿ ವರ್ಲ್ಡ್ ಮ್ಯೂಸಿಕ್ ಫೆಸ್ಟಿವಲ್‌ನಲ್ಲಿ ಭಾಗವಹಿಸಿದೆ. ಇದೇ ವರ್ಷ ತಂದೆ ಜೊತೆಗೂಡಿ ಅಮೆರಿಕದಲ್ಲಿ ಒಂದೂವರೆ ತಿಂಗಳ ಕಾಲ ಸಂಗೀತ ಪ್ರವಾಸ ಕೈಗೊಂಡು ಅನೇಕ ಸೋಲೊ, ಸಾಥಿ ಕಛೇರಿ ನೀಡಿದೆ.

## ಯುವ ಪುರಸ್ಕಾರ

- ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ.
- ಉಸ್ತಾದ್ ಬಿಸ್ಮಿಲ್ಲಾಖಾನ್ ಯುವ ಸಂಗೀತ ಪುರಸ್ಕಾರ .

ಇನ್ನೊಂದು ಪ್ರಮುಖ ವಿಚಾರ ನೆನಪಿಸಿಕೊಳ್ಳಲೇ ಬೇಕು. ಇದು 1998ರಲ್ಲಿ ನಡೆದದ್ದು. ಫ್ರಾನ್ಸ್‌ನಲ್ಲಿ ವಿಶ್ವವಿಖ್ಯಾತ ಸಂಗೀತ ಸಮ್ಮೇಳನ. ಅಲ್ಲಿ ನಾನು ತಬಲಾ ಸೋಲೊ ನುಡಿಸಿದೆ. ಇದನ್ನು ಬಹಳಷ್ಟು ಸಂಗೀತಜ್ಞರು ಇಷ್ಟಪಟ್ಟರು. ಜೊತೆಗೆ ಫ್ರಾನ್ಸ್ ಸರ್ಕಾರ ನನ್ನ ಮೇಲೆ 'ರಿಂಪಾ ಶಿವ: ಪ್ರಿನ್ಸೆಸ್ ಆಫ್ ತಬಲಾ' ಎಂಬ 26 ನಿಮಿಷಗಳ ಸಾಕ್ಷ್ಯಚಿತ್ರ ನಿರ್ಮಿಸಿತು. ಇದು ಲಂಡನ್, ಇಟಲಿಗಳಲ್ಲೂ ಬಹಳ ಜನಪ್ರಿಯವಾಯಿತು.

ಮುಂದೆ ಹಲವು ದಿಗ್ಗಜರಿಗೂ ತಬಲಾ ಸಾಥಿ ನೀಡುವ ಅವಕಾಶ ಸಿಕ್ಕಿತು. ಪಂ. ಜಸರಾಜ್ ಅವರ ಗಾಯನಕ್ಕೆ ಸಾಥಿ ನೀಡಿದ್ದೆ. ಅಮೆರಿಕದಲ್ಲಿ ಬಾನ್ಸುರಿ ವಿದ್ವಾಂಸರಾದ ಪಂ. ಹರಿಪ್ರಸಾದ್ ಚೌರಾಸಿಯ ಅವರ ಕೊಳಲು ಕಛೇರಿಗೂ ತಬಲಾ ಸಾಥಿ ನೀಡಿದೆ. ಫ್ರಾನ್ಸ್, ಜರ್ಮನಿ, ಟ್ಯುನೇಶಿಯ, ದಕ್ಷಿಣ ಆಫ್ರಿಕಾಗಳಲ್ಲಿ ಒಂದಾದ ಮೇಲೊಂದರಂತೆ ತಬಲಾ ಸೋಲೊ ಕಛೇರಿ ನೀಡಿ ಈ ವಾದನದಲ್ಲಿ ಸಂಪೂರ್ಣ ಹಿಡಿತ ಸಾಧಿಸಿದೆ. ಮುಂದೆ ಅನೇಕ ವಿಶ್ವವಿಖ್ಯಾತ ಬ್ಯಾಂಡ್‌ಗಳಲ್ಲಿಯೂ ನುಡಿಸುವ ಅವಕಾಶ ನನ್ನದಾಯಿತು. 'ನಾರಿಶಕ್ತಿ ತಬಲಾ' ಬ್ಯಾಂಡ್, 'ರಿದಂ ಆಫ್ ಬಂದೀಶ್' ಸಂಗೀತ ವಾದ್ಯ ಬ್ಯಾಂಡ್‌ನಲ್ಲಿಯೂ ನುಡಿಸಿದೆ. ಅಲ್ಲದೆ ಪಖಾವಾಜ್ ಜೊತೆಯೂ ಜುಗಲ್‌ಬಂದಿ ನೀಡಿದೆ.

ಬೆಂಗಳೂರು ನನಗೆ ಅತ್ಯಂತ ಪ್ರಿಯವಾದ ನಗರಗಳಲ್ಲೊಂದು. 2020ರ ಫೆಬ್ರುವರಿಯಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಪಂ. ಅರ್ಜುನಸಾ ನಾಕೋಡ ನೆನಪಿನ 'ಸ್ಮೃತಿ' ಸಂಗೀತೋತ್ಸವದಲ್ಲಿ ಪಂ. ಅನುಬ್ರತೊ ಚಟರ್ಜಿ ಜೊತೆ ತಬಲಾ ಜುಗಲ್‌ಬಂದಿ ನಡೆಸಿಕೊಟ್ಟದ್ದು ಕೇಳುಗರು ಬಹಳ ಪ್ರಶಂಸೆ ವ್ಯಕ್ತಪಡಿಸಿದ್ದರು.

ಇನ್ನು ತಬಲಾ ನನ್ನ ಪ್ರಪಂಚವಾದರೂ ಕೊರೊನಾದಿಂದ ಮನೆಯಲ್ಲಿಯೇ ಬಂಧಿಯಾಗಿರುವುದರಿಂದ ಫೋಟೊಗ್ರಫಿ, ಪಕ್ಷಿವೀಕ್ಷಣೆಗಳಂತಹ ಹವ್ಯಾಸಗಳನ್ನೂ ರೂಢಿಸಿಕೊಂಡಿದ್ದೇನೆ.

ಹಾಂ, ಇನ್ನೊಂದು ಮಾತು. ತಬಲಾ ಕೇವಲ ಪುರುಷರ ವಾದ್ಯವಲ್ಲ. ಮಹಿಳೆಯರೂ ಇದರಲ್ಲಿ ಯಶ ಸಾಧಿಸಬಹುದು. 'ನಾರಿ ಶಕ್ತಿ' ಏನು ಎಂಬುದನ್ನು ಜಗತ್ತಿಗೇ ತೋರಿಸಿಕೊಡಬೇಕು ಎಂಬುದೇ ನನ್ನ ಆಶಯ ಕೂಡ.

ಸದ್ಯ 34ರ ಹರೆಯದಲ್ಲಿರುವ ಈ ವಿಶ್ವವಿಖ್ಯಾತ ಯುವ ತಬಲಾ ವಾದಕಿ ತನ್ನ ಜೀವನ ಕಥನವನ್ನು ಹೇಳಿ ಮುಗಿಸುತ್ತಾ ಹೆಣ್ಣು ಮಕ್ಕಳು ಯಾವಾಗಲೂ ಅಪರೂಪದ ವಾದ್ಯಗಳಲ್ಲಿ ಪಳಗಿ, ಪುರುಷ ಕಲಾವಿದರಿಗಿಂತಲೂ ಮೇಲ್ಪಂಕ್ತಿ ಹಾಕಬೇಕು ಎಂಬುದನ್ನು ಹೇಳಲು ಮರೆಯಲಿಲ್ಲ. ■